



**SARAYU** - Kannada Monthly Regn. No. KARKAN/2014/62363

April 2016 Vol. : 2 Issue : 12 5118/ದುರ್ಮುಖಿ ಸಂವತ್ಸರ ಎಪ್ರಿಲ್ 2016 ಪುಟ 8 ಬೆಲೆ : ರೂ. **10/–**


# ಸಾಮರಸ್ಯ ದಿನ

**ದಿನಾಂಕ 5–2–2016 ಮಾಘ ಬಹುಳ ಏಕಾದಶಿ**

**ರಾ.ಸ್ವ.ಸಂ.ನ ದ್ವಿತೀಯ ಸರಸಂಘಚಾಲಕ ಪ.ಪೂ. ಶ್ರೀ ಮಾಧವ ಸದಾಶಿವ ರಾವ್ ಗೋಳ್ವಲ್ಕರ್ ಇವರ ಜನ್ಮದಿನ. ಇದರ ಅಂಗವಾಗಿ ಪೂರ್ವಗುರುಕುಲ (1–4ನೇ ತರಗತಿ) ಹಾಗೂ ಶಿಶು ಮಂದಿರದ ಪುಟಾಣಿಗಳ ಪ್ರತಿಭಾ ದಿನೋತ್ಸವ–ಭಾರತಮಾತಾ ಪೂಜನ್–ಶ್ರೀ ಗುರೂಜಿ ಜೀವನ ಸಂಸ್ಮರಣೆ ಹಾಗೂ ಸಾಮರಸ್ಯ ಸಹಭೋಜನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**

ಮುಖ್ಯ ಅತಿಥಿಗಳಾಗಿ ಬೈಕಂಪಾಡಿ ವಿಜಯ ಬ್ಯಾಂಕಿನ ಸೀನಿಯರ್ ಮ್ಯಾನೇಜರ್ ಶ್ರೀ ಮಂಜುನಾಥ ಭಟ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಯಕ್ಷಗಾನ ಕಲಾವಿದ ಹಾಗೂ ಮಂಗಳೂರು ವಿಭಾಗ ಕಾರ್ಯಕಾರಿಣಿ ಸದಸ್ಯ ಶ್ರೀ ರವಿ ಅಲೆವೂರಾಯ ಇವರು ಗುರೂಜಿ ಜೀವನ ಸಂಸ್ಮರಣೆ ನಡೆಸಿಕೊಟ್ಟರು. ವಿದ್ಯಾಕೇಂದ್ರದ ಹಿರಿಯರಾದ ಡಾ| ಪ್ರಭಾಕರ ಭಟ್, ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ, ಮತ್ತಿತರರು ಉಪಸ್ಥಿತರಿದ್ದರು.

ಸುಮಾರು 450ಕ್ಕಿಂತಲೂ ಹೆಚ್ಚು ಮನೆಗಳಿಂದ ಸಾಂಬಾರು, ಪಲ್ಯ ಹಾಗೂ ಕೊಬ್ಬರಿ ಮಿಠಾಯಿಗಳನ್ನು ತಾಯಂದಿರು ತಯಾರಿಸಿ ತಂದು ವಿದ್ಯಾಕೇಂದ್ರದ ಮೈದಾನದಲ್ಲಿ ಜಾತಿ,ಮತ,ಭೇದ ಮರೆತು ಎಲ್ಲರೂ ಒಟ್ಟಾಗಿ ಕುಳಿತು ಭೋಜನ ಸ್ವೀಕರಿಸಿದುದು ಅಂದಿನ ವಿಶೇಷತೆಯಾಗಿತ್ತು. ಒಟ್ಟು 1500ಕ್ಕಿಂತಲೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಸಂಜೆ ಸುಮಾರು 2 ಗಂಟೆಗಳ ಕಾಲ ಶಿಶುಮಂದಿರದ ಹಾಗೂ ಪೂರ್ವ ಪ್ರಾಥಮಿಕದ ಪುಟಾಣಿಗಳಿಂದ ವಿವಿಧ ದೇಶಭಕ್ತಿಯ ನೃತ್ಯ, ರೂಪಕ, ನಾಟಕ ಹಾಗೂ ಪ್ರಾಥಮಿಕ ಶಾಲಾ ವಿಭಾಗದ ವಿದ್ಯಾರ್ಥಿಗಳಿಂದ ಸಾಮಾಜಿಕ ಜಾಗೃತಿ ಮೂಡಿಸುವ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿಬಂದವು. ಆಗಮಿಸಿದ ಎಲ್ಲಾ ತಾಯಂದಿರು ಭಾರತಮಾತೆಯ ಭಾವಚಿತ್ರಕ್ಕೆ ದೀಪ ಬೆಳಗಿ ಪುಷ್ಪಾರ್ಚನೆಗೈದು ಭಾರತಮಾತಾ ಪೂಜನ್ ಆಚರಿಸಿದರು.




**ಸಭಾ ಕಾರ್ಯಕ್ರಮ**



**ಸಾಂಸ್ಕೃತಿಕ ಕಾರ್ಯಕ್ರಮ**



**ಸಾಮೂಹಿಕ ಸಹಭೋಜನ**




## ಪದವಿ ಪ್ರತಿಭಾದಿನೋತ್ಸವ 26–03–2016

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಕಾಲೇಜಿನ 2015–16ರ ವಾರ್ಷಿಕೋತ್ಸವ ಮಧುಕರ ಸಭಾಂಗಣದಲ್ಲಿ ನಡೆಯಿತು. ತುಳುಚಿತ್ರರಂಗ ಹಾಗೂ ರಂಗಭೂಮಿಯ ಪ್ರಸಿದ್ಧ ಕಲಾವಿದ **ಶ್ರೀ ನವೀನ್ ಡಿ. ಪಡೀಲ್** ಹಾಗೂ ಮಂಗಳೂರು ವಿಶ್ವವಿದ್ಯಾನಿಲಯ ಪ್ರಾಧ್ಯಾಪಕ ಸಂಘದ ಅಧ್ಯಕ್ಷ **ಕೆ.ಎಮ್. ಬಾಲಕೃಷ್ಣ** ಹಾಗೂ ಕ್ಯಾಂಪ್ಕೋ ನಿರ್ದೇಶಕ **ಕೃಷ್ಣಪ್ರಸಾದ ಮಡ್ತಿಲ** ಅತಿಥಿಗಳಾಗಿ ಭಾಗವಹಿಸಿದ್ದರು. ವಿದ್ಯಾರ್ಥಿಗಳು ನಡೆಸಿಕೊಟ್ಟ ಜಲಸಂರಕ್ಷಣೆ ಮತ್ತು ಅದರ ಮಹತ್ವವನ್ನು ಕುರಿತ ನಾಟಕ, ನೃತ್ಯರೂಪಕ ಹಾಗೂ ಯಕ್ಷಗಾನಗಳು ಗಮನ ಸೆಳೆದವು. **(ಸಚಿತ್ರ ವಿವರಗಳು ಪುಟ 8ರಲ್ಲಿ)**

# ಜವಾಬ್ದಾರಿಯ ಅರಿವು

ಚಿಂತನರಶ್ಮಿ

ಅವರೊಬ್ಬರು ಸ್ವಾತಂತ್ರ್ಯ ಹೋರಾಟಗಾರರು. ತುಂಬಾ ನಿಯತ್ತಿನ ಮನುಷ್ಯ. ಅವರ ಬಗ್ಗೆ ಊರಿನಲ್ಲಿ ಎಲ್ಲರಿಗೂ ತುಂಬಾ ಗೌರವ. ಜಿಲ್ಲಾಧಿಕಾರಿಗಳಿಗೂ ಆತ್ಮೀಯರಾಗಿದ್ದರು. ಒಮ್ಮೆ ಈ ಸಜ್ಜನರು, ಒಬ್ಬ ಬಾಲಕನನ್ನು "ಸನ್ಮಾನಿಸಬೇಕು" ಎಂದು ವಿನಂತಿಸಿಕೊಂಡರು. ವೃದ್ಧರಾಗಿದ್ದ ಆ ಸಜ್ಜನರ ಬಗ್ಗೆ ತುಂಬ ಗೌರವವಿದ್ದ ಜಿಲ್ಲಾಧಿಕಾರಿಗಳು ಏನನ್ನೂ ಮಾತನಾಡದೇ, ಆ ಬಾಲಕನಿಗೆ ಒಂದಷ್ಟು ಹಣ್ಣು, ಸಿಹಿತಿಂಡಿ ಕೊಟ್ಟು ಸನ್ಮಾನಿಸಿದರು. ಅನಂತರ "ಈತನಿಗೆ ಏಕೆ ಸನ್ಮಾನ ಎಂದು ಹೇಳಬಹುದೇ?" ಎಂದು ಕೇಳಿದರು. ಆ ಸಜ್ಜನರು–"ಸಾರ್! ಇಂದು ಬೆಳಗ್ಗೆ ನಾನು ಹೆದ್ದಾರಿಯಲ್ಲಿ ನಡೆದು ಬರುತ್ತಿದ್ದೆ. ಏನೋ ಯೋಚನೆ ಮಾಡುತ್ತಾ ಬರುತ್ತಿದ್ದ ನಾನು, ರಸ್ತೆಯಲ್ಲಿ ಬಿದ್ದಿದ್ದ ದೊಡ್ಡ ಕಲ್ಲೊಂದನ್ನು ಗಮನಿಸಲಿಲ್ಲ. ಅದರ ಮೇಲೆ ಎಡವಿ ಬಿದ್ದೆ. ಕಾಲಿಗೆ ಜೋರಾಗಿಯೇ ಪೆಟ್ಟು ಬಿದ್ದಿತ್ತು. ನೋವಿನಿಂದ ನೆಲದ ಮೇಲೆಯೇ ಕುಳಿತಿದ್ದೆ.

ಆಗ ರಸ್ತೆಯಲ್ಲಿ ನಡೆದು ಬರುತ್ತಿದ್ದ ಇನ್ನೊಬ್ಬ ವ್ಯಕ್ತಿಯೂ, ಇದೇ ಕಲ್ಲಿನಿಂದ ಎಡವಿ ಬಿದ್ದರು. ತಕ್ಷಣ ಮೇಲಕ್ಕೆದ್ದು–"ಯಾರೋ ಅಯೋಗ್ಯರು ಕಲ್ಲನ್ನು ರಸ್ತೆಯ ಮಧ್ಯೆ ಹಾಕಿದ್ದಾರೆ. ಅವರೇನಾದರೂ ಕೈಗೆ ಸಿಕ್ಕರೆ ಅವರನ್ನು ಹುಡಿ–ಹುಡಿ ಮಾಡುತ್ತೇನೆ" ಎಂದು ಕಿರುಚಾಡುತ್ತಾ ಹೋದರು. ನಾನು ಅಲ್ಲಿಯೇ ಕುಳಿತಿದ್ದೆ. ಮತ್ತೊಬ್ಬರು ಬಂದರು. ಅವರೂ ಎಡವಿ ಬಿದ್ದರು. ಮೇಲಕ್ಕೆದ್ದು ನಿಂತರು. "ಸಾರ್ವಜನಿಕರ ರಸ್ತೆಯಲ್ಲಿ ಬಿದ್ದಿರುವ ಕಲ್ಲುಗಳನ್ನು ತೆಗೆದು ರಸ್ತೆಗಳನ್ನು ಸುಗಮಗೊಳಿಸುವುದು ಸರಕಾರದ ಜವಾಬ್ದಾರಿ. ಈ ಸರಕಾರ ಸತ್ತೇ ಹೋಗಿದೆ" ಎನ್ನುತ್ತ ಸರಕಾರವನ್ನು ಬೈಯುತ್ತಾ ಹೋದರು. ಮಗದೊಬ್ಬರು ಬಂದರು. ಅವರೂ ಎಡವಿ ಬಿದ್ದರು. ಅವರೂ ಎದ್ದು ನಿಂತು "ನಮ್ಮೂರಿನ ಜನರು ಎಂತಹವರು? ನಾಗರಿಕ ಪ್ರಜ್ಞೆಯೇ ಇಲ್ಲ"–ಎಂದು ಗಟ್ಟಿಯಾಗಿ ಹೇಳಿಕೊಳ್ಳುತ್ತ ಹೊರಟು ಹೋದರು. ಅದೇ ಸಮಯಕ್ಕೆ ಈ ಬಾಲಕ ಅಲ್ಲಿಗೆ ಬಂದ. ಅವನಿಗೆ ಕಲ್ಲು ಕಂಡಿತು. ಅವನು ಅತ್ತಿತ್ತ ನೋಡಿದ. ರಸ್ತೆಯಲ್ಲಿ ಜನ ಬಿಡುವಿಲ್ಲದವರಂತೆ ಓಡಾಡುತ್ತಿದ್ದರು. ಅಲ್ಲಿ ಸುಮ್ಮನೆ ಕುಳಿತಿದ್ದವನು ನಾನೊಬ್ಬನೇ, ನನ್ನನ್ನು ಕುರಿತು, "ಅಜ್ಜಾ! ರಸ್ತೆಯಲ್ಲೊಂದು ಕಲ್ಲು ಬಿದ್ದಿದೆ. ಯಾರಾದರೂ ಅದನ್ನು ಎಡವಿದರೆ, ಕಾಲು ಗಾಯ ಮಾಡಿಕೊಳ್ಳುತ್ತಾರೆ. ನನ್ನೊಬ್ಬನ ಕೈಯಲ್ಲಿ ಆ ಕಲ್ಲನ್ನು ಎತ್ತಿ ಬದಿಗಿಡಲು ಆಗುವುದಿಲ್ಲ. ನೀವು ನನ್ನೊಂದಿಗೆ ಸ್ವಲ್ಪ ಕೈ ಕೊಟ್ಟರೆ, ಕಲ್ಲನ್ನು ಎತ್ತಿ ಬಿಸಾಡಬಹುದು" ಎಂದು ಹೇಳಿದ. ನಾನು ಅವನೊಂದಿಗೆ ಹೋದೆ.

ನಾವಿಬ್ಬರೂ ಸೇರಿ ಕಲ್ಲನ್ನು ಪಕ್ಕಕ್ಕೆ ಸರಿಸಿದೆವು. ತಾವೇ ಮಾಡಬಹುದಾದ ಕೆಲಸವನ್ನು ತಾವು ಮಾಡದೆ; ಸರಕಾರವನ್ನೋ, ಸಮಾಜವನ್ನೋ, ಯಾರು– ಯಾರನ್ನೋ ದೂಷಿಸುವ ಜನರ ಮಧ್ಯೆ, ಇಂತಹ ಬಾಲಕರೂ ಇದ್ದಾರಲ್ಲ ಎಂಬ ಸಂತೋಷ ನನಗಾಯಿತು. ಅದಕ್ಕೆ ನಿಮ್ಮಿಂದ ಆತನಿಗೆ ಸನ್ಮಾನ ಮಾಡಿಸಿದೆ" ಎಂದು ಹೇಳಿ, ಆ ಸಜ್ಜನರು ಅಲ್ಲಿಂದ ಹೊರಟರು. ಜಿಲ್ಲಾಧಿಕಾರಿಗಳು ಅವರನ್ನು ವಂದಿಸಿ, ಕಳುಹಿಸಿಕೊಟ್ಟರು. ■

## ಸುಭಾಷಿತ ಮಂಜರೀ

ತೃಷ್ಣಾಂ ಛಿಂಧಿ ಭಜ ಕ್ಷಮಾಂ ಜಹಿ ಮದಂ
ಪಾಪೇ ರತಿಂ ಮಾ ಕ್ರಥಾಃ
ಸತ್ಯಂ ಬ್ರೂಹ್ಯನುಯಾಹಿ ಸಾಧುಪದವೀಂ
ಸೇವಸ್ವ ವಿದ್ವಜ್ಜನಾನ್ ।
ಮಾನ್ಯಾನ್ಮಾನಯ ವಿದ್ವಿಷೋ ಪ್ಯನುನಯ
ಪ್ರಖ್ಯಾಪಯ ಸ್ವಾನ್ ಗುಣಾನ್
ಕೀರ್ತಿಂ ಪಾಲಯ ದುಃಖಿತೇ ಕುರು ದಯಾಂ
ಏತತ್ಸತಾಂ ಲಕ್ಷಣಮ್ ॥

ಆಶೆಯನ್ನು ಕತ್ತರಿಸು, ಕ್ಷಮೆಯನ್ನು ಹೊಂದು, ಮದವನ್ನು ಕೊಲ್ಲು, ಪಾಪದಲ್ಲಿ ಮನಸ್ಸಿಡಬೇಡ, ಸತ್ಯವನ್ನು ಹೇಳು, ಸಾಧುಮಾರ್ಗವನ್ನನುಸರಿಸು, ವಿದ್ವಾಂಸರನ್ನು ಸೇವಿಸು, ಮಾನ್ಯರನ್ನು ಗೌರವಿಸು, ಶತ್ರುಗಳನ್ನು ಸಮಾಧಾನಗೊಳಿಸು, ನಿನ್ನ ಗುಣಗಳನ್ನು ಪ್ರಕಟಿಸು, ಕೀರ್ತಿಯನ್ನು ಕಾಪಾಡಿಕೋ, ನೊಂದವರಿಗೆ ದಯೆತೋರಿಸು, ಇದೇ ಸತ್ಪುರುಷರ ಲಕ್ಷಣ.


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ದಿವ್ಯಾಕುಮಾರಿ (ಶಿಶುಮಂದಿರ)
ಕಾವ್ಯ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ದೀಪ್ತಿ (ಪದವಿಪೂರ್ವ)
ಜ್ಯೋತಿ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
ಜಯಾನಂದ ಪೆರಾಜೆ (ವಿದ್ಯಾಕೇಂದ್ರ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಪೂರು
**ವಿನ್ಯಾಸ :** ಅನಘ ಡಿಜಿಟಲ್ ಸ್ಕ್ವೇರ್, ಕೈಕಂಬ


## ತಾಳೆಗರಿ ಗ್ರಂಥಗಳ ಕಳ್ಳತನ

ಬುತ್ತಿ

2003ರ ಮಾರ್ಚ್ 28ರಂದು ದರಭಂಗಾದಲ್ಲಿರುವ 'ಮಿಥಿಲಾ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್ ಗ್ರಾಜುಯೇಟ್ ಸ್ಟಡೀಸ್ ಎಂಡ್ ರಿಸರ್ಚ್' ಎಂಬ ಸಂಶೋಧನಕೇಂದ್ರದಿಂದ 28 ತಾಳೆಗರಿ ಗ್ರಂಥಗಳು ಕಳುವಾದವು. ಒಂದು ತಿಂಗಳ ನಂತರ ದರಭಂಗಾ ಸಂಸ್ಕೃತ ವಿಶ್ವವಿದ್ಯಾಲಯದಿಂದಲೂ ಹತ್ತು ತಾಳೆಗರಿ ಗ್ರಂಥಗಳು ಕಳುವಾದವು. ಇವೆರಡೂ ಕಳ್ಳತನವನ್ನು ಕುರಿತಂತೆ ಕೂಡಲೇ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಲಾಯಿತಾದರೂ ಏನೂ ಪ್ರಯೋಜನವಾಗಲಿಲ್ಲ. ಈ ವಿಷಯವನ್ನು ಸಿ.ಬಿ.ಐ.ಗೆ ವಹಿಸಿದರೂ ಈಗ ಕೆಲಸದ ಬಾಹುಳ್ಯವಿರುವುದರಿಂದ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗದು' ಎಂದು ಸಿ.ಬಿ.ಐ. ಹೇಳಿಬಿಟ್ಟಿತು.. ಹೀಗೆ ತಾಳೆಗರಿ ಗ್ರಂಥಗಳ ಕಳುವಿನ ಪ್ರಕರಣವೊಂದು ಕೇಳುವವರಿಲ್ಲದೇ ಮೂಲೆ ಗುಂಪಾಗಿ ಹೋಯಿತು.

ಆ ತಾಳೆಗರಿ ಗ್ರಂಥಗಳಲ್ಲಿ ಅಮೂಲ್ಯ ವಿಷಯಗಳಿದ್ದವೆಂಬುದಕ್ಕೆ ಅವು ಕಳುವಾಗಿರುವುದೇ ಸಾಕ್ಷಿಯಾಗಿದೆ. ಕೆಲ ವರ್ಷಗಳ ಹಿಂದೆ ಕೇರಳದಲ್ಲೂ ತಾಳೆಗರಿ ಗ್ರಂಥಗಳನ್ನು ವಿದೇಶಕ್ಕೆ ಒಯ್ಯುತ್ತಿದ್ದವನನ್ನು ಕಸ್ಟಮ್ಸ್ ಅಧಿಕಾರಿಗಳು ಹಿಡಿದಿದ್ದರು. ಅದು ಪತ್ರಿಕೆಗಳಲ್ಲೂ ಪ್ರಕಟವಾಗಿತ್ತು. ಆದರೆ ಅವನ್ನೊಯ್ಯುತ್ತಿದ್ದವರು ರಾಜಕೀಯ ಬಲದಿಂದ ಪ್ರಕರಣ ಮುಚ್ಚಿ ಹಾಕುವಲ್ಲಿ ಸಮರ್ಥರಾದರು. ಮುಂದೆ ಆ ತಾಳೆಗರಿಗ್ರಂಥಗಳ ಕಥೆ ಏನಾಯಿತೆಂದು ಯಾರಿಗೂ ತಿಳಿಯದು. ಅವು ವಿದೇಶಕ್ಕೆ ತಲುಪಿರಲಿಕ್ಕೂ ಸಾಕು. ಪ್ರಕರಣವೇ ಮುಚ್ಚಿ ಹೋಗಿದ್ದರಿಂದ ಅದಕ್ಕೆ ಸಂಬಂಧಿಸಿದ ಯವುದೇ ವಿವರಗಳು ಹೊರ ಬರಲಿಲ್ಲ. ತಾಡಗ್ರಂಥಗಳ ಬಗ್ಗೆ ಉಪೇಕ್ಷೆ ಎಷ್ಟರ ಮಟ್ಟಿಗಿದೆ ಎಂಬುದಕ್ಕೆ ಚಿಕ್ಕ ಉದಾಹರಣೆಗಳಿವು. ನಲಂದಾ ಮುಂತಾದೆಡೆ ವಿದೇಶಿಯ ಆಕ್ರಮಣಕಾರರು ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದಾಗ ಕೆಲವು ದಿನಗಳ ಕಾಲ ಅವು ಉರಿದವು ಎಂಬುದನ್ನು ನಾವು ಕೇಳಿ ಬಲ್ಲೆವು. ಆಗ ಎಷ್ಟು ತಾಳೆಗರಿ ಗ್ರಂಥಗಳು ಉರಿದು ಹೋದವೋ ನಮಗೇ ತಿಳಿಯದು. 13ನೇ ಶತಕದಲ್ಲಿ ಕಾಮರೂಪವೇ ಮುಂತಾದೆಡೆ ಪ್ರವಾಸ ಮುಗಿಸಿ ಬಂದ ಆನಂದತೀರ್ಥರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಬರೆಯುತ್ತಾರೆ– (ತಾಳೆಗರಿ ಗ್ರಂಥಗಳಲ್ಲಿ ಹೆಚ್ಚಿನ ಎಲ್ಲವೂ ನಾಶವಾದವು. ಕೋಟಿಯಲ್ಲಿ ಒಂದಂಶವೂ ಇಂದು ಉಳಿದಿಲ್ಲ) ಎಂದು. ಭಾರತದ ಬಗ್ಗೆ ವಿದೇಶಿಯರಿಗಿದ್ದ ದೃಷ್ಟಿಯನ್ನೇ ಬದಲಿಸಿದ ಕೌಟಿಲ್ಯನ ಅರ್ಥಶಾಸ್ತ್ರದ ತಾಳೆಗರಿ ಗ್ರಂಥ ಸಿಕ್ಕಿದ್ದು ಕಳೆದ ಶತಮಾನದಲ್ಲಿ, ಭಾಸನಾಟಕಗಳು ಸಿಕ್ಕದ್ದೂ ಕಳೆದ ಶತಕದಲ್ಲಿಯೇ, ಅಲ್ಲಿಯವರೆಗೂ ಅವುಗಳ ಉಲ್ಲೇಖ ಮಾತ್ರ ಸಿಗುತ್ತಿತ್ತು. ಹೀಗೆ ತಾಳೆಗರಿ ಗ್ರಂಥಗಳಲ್ಲಿ ಇರುವ ಸಂಪತ್ತು ಎಣೆಯಿಲ್ಲದ್ದು. ಸರಿಯಾದ ರಕ್ಷಣೆಯಿಲ್ಲದೆಸ ಅವು ಹುಳು ತಿನ್ನುತ್ತಿರುವುದು ಕೆಲವೆಡೆಯಾದರೆ ಮತ್ತೆ ಕೆಲವೆಡೆ ಅವು ಕಳುವಿನಿಂದಾಗಿ ಕಾಣೆಯಾಗುತ್ತಿವೆಯೆಂಬುದು ತುಂಬ ಬೇಸರದ ಸಂಗತಿ. ■

## ಶಿಶುಮಂದಿರ

### ಪಾಲಕರ ಸಭೆ



4–3–2016 ಶ್ರೀ ಸರಸ್ವತಿ ಶಿಶುಮಂದಿರ ಶೇಡಿಗುರಿ. ಶ್ರೀರಾಮ ಶಿಶುಮಂದಿರ ಕಲ್ಲಡ್ಕ. ಸಂಸ್ಥೆಯ ಸಂಚಾಲಕ ಡಾ/ಪ್ರಭಾಕರ ಭಟ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲಕರೊಂದಿಗೆ ಸಂವಾದ ನಡೆಯಿತು. ಸರಸ್ವತಿ ಶಿಶುಮಂದಿರದಲ್ಲಿ ಒಟ್ಟು 20 ಮಂದಿ ಪಾಲಕರು, ಶ್ರೀರಾಮ ಶಿಶುಮಂದಿರದಲ್ಲಿ ಒಟ್ಟು 128 ಪಾಲಕರು ಭಾಗವಹಿಸಿದ್ದರು.

### ಸಾಮೂಹಿಕ ಹುಟ್ಟುಹಬ್ಬ



ದಿನಾಂಕ 21–03–2016 ಶ್ರೀ ರಾಮ ಶಿಶುಮಂದಿರದ ಪುಟಾಣಿಗಳಿಗೆ ಸಾಮೂಹಿಕ ಹುಟ್ಟುಹಬ್ಬ ಆಚರಿಸಲಾಯಿತು. ಶಿಶುಮಂದಿರದ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ವ್ಯವಸ್ಥಾಪಕರು, ಸದಸ್ಯರು, ಉಪಸ್ಥಿತರಿದ್ದು. ಆರತಿಯೆತ್ತಿ ಅಕ್ಷತೆ, ಹಾಕಿ ತಿಲಕ ಇಟ್ಟು ಸಿಹಿಯನ್ನು ನೀಡಿ ಆಶೀರ್ವದಿಸಿದರು.

### ಸಾಮೂಹಿಕ ಹುಟ್ಟುಹಬ್ಬ ಮತ್ತು ಪ್ರತಿಭಾ ದಿನೋತ್ಸವ

ದಿನಾಂಕ 27–03–2016

ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟಿನಲ್ಲಿ ಶಿಶುಮಂದಿರದ ಪುಟಾಣಿಗಳ ಬಾಲಗೋಕುಲ, ಮಾತೃಮಂಡಳಿ, ಯೋಗ ತಂಡದ ಮಾತೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಚರಿಸಲಾಯಿತು. ಪ್ರಾರಂಭದಲ್ಲಿ ಮಕ್ಕಳ ಸಾಮೂಹಿಕ ಹುಟ್ಟುಹಬ್ಬವನ್ನು ಮಾಡಲಾಯಿತು ಶಿಶುಮಂದಿರದ ಮಾತೆಯರು ಪುಟಾಣಿಗಳಿಗೆ ಆರತಿ, ಅಕ್ಷತೆ, ತಿಲಕ ಇಟ್ಟು ಸಿಹಿಯನ್ನು ನೀಡಿ ಆಶೀರ್ವದಿಸಿದರು. ಸಭಾ ಕಾರ್ಯಕ್ರಮದಲ್ಲಿ ಶ್ರೀ ಸುಧಾಕರ್, ಕೃಷ್ಣಪ್ರಸಾದ ಪ್ರಸಾದ್ ಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಬಜಾರ್ ಐಸ್‌ಕ್ರೀಂನ ಶ್ರೀ ಸುಧಾಕರ ಆಚಾರ್ಯ ಮತ್ತು ಶಿಶುಮಂದಿರದ ಅಧ್ಯಕ್ಷ ಶ್ರೀ ಪ್ರಮೋದ್ ಕುಮಾರ್ ಉಪಸ್ಥಿತರಿದ್ದರು. ಒಟ್ಟು 350 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

### ಸಾಮೂಹಿಕ ಹುಟ್ಟುಹಬ್ಬ, ಪ್ರತಿಭಾ ದಿನೋತ್ಸವ ಕಾರ್ಯಕ್ರಮ

ದಿನಾಂಕ: 29–3–2016



ಶ್ರೀಕೃಷ್ಣ ಶಿಶುಮಂದಿರ ಸಜೀಪ ಕಂದೂರಿನಲ್ಲಿ ಪುಟಾಣಿಗಳಿಗೆ ಸಾಮೂಹಿಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಶಿಶುಮಂದಿರದ ಮಾತೆಯರು ಪುಟಾಣಿಗಳಿಗೆ ಆರತಿ ಎತ್ತಿ ಅಕ್ಷತೆ ಹಾಕಿ ತಿಲಕ ಇಟ್ಟು ಸಿಹಿಯನ್ನು ನೀಡಿ ಆಶೀರ್ವದಿಸಿದರು. ನಂತರ ಶಿಶುಮಂದಿರದ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀಮತಿ ಡಾ॥ ಕಮಲಾ ಭಟ್, ಭ॥ ಗಂಗಾ, ನಾರಾಯಣ ಸೋಮಯಾಜಿ, ಲಕ್ಷ್ಮೀನಾರಾಯಣ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 100 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಕೊನೆಯಲ್ಲಿ ಸಹಭೋಜನ ನಡೆಯಿತು.

### ಸಾಮೂಹಿಕ ಹುಟ್ಟುಹಬ್ಬ ಮತ್ತು ಪ್ರತಿಭಾ ದಿನೋತ್ಸವ ಕಾರ್ಯಕ್ರಮ

ದಿನಾಂಕ 31–3–2016



ಶ್ರೀಸರಸ್ವತಿ ಶಿಶುಮಂದಿರ ಶೇಡಿಗುರಿಯಲ್ಲಿ ಪುಟಾಣಿಗಳಿಗೆ ಸಾಮೂಹಿಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಶ್ರೀಮತಿ ಆಶಾ ಪ್ರಸಾದ್ ಕಾರ್ಯಕ್ರಮದ ಮಹತ್ವ ತಿಳಿಸಿದರು. ನಂತರ ಶಿಶುಮಂದಿರದ ಪುಟಾಣಿಗಳ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಒಟ್ಟು 90 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಪ್ರಾಥಮಿಕ ಶಾಲೆ

### ದೀಪ ಪ್ರದಾನ



ಕಲ್ಲಡ್ಕ : ದಿನಾಂಕ 30.03.2016 ರಂದು ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ಇಲ್ಲಿ 7ನೇ ತರಗತಿ ವಿದ್ಯಾರ್ಥಿಗಳನ್ನು ಮುಂದಿನ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿಕೊಡುವ ದೀಪಪ್ರದಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಅತಿಥಿಗಳಾದ ಸಂಘದ ಪ್ರಮುಖರು ಹಾಗೂ ಬೆಂಗಳೂರಿನ ಉದ್ಯೋಗಿಗಳಾದ ರಾಜಗೋಪಾಲ್ ಮಾತನಾಡುತ್ತಾ ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸದ ಸಂದರ್ಭದಲ್ಲಿ ಎಲ್ಲಾ ಆಸೆಗಳನ್ನು ತೊರೆದು ಜ್ಞಾನ ಸಂಪಾದನೆಯೊಂದೆ ಗುರಿಯಾಗಿರಬೇಕು, ವಿದ್ಯೆಯನ್ನು ಪಡೆದ ನಂತರದಲ್ಲಿ ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಉತ್ತಮ ಪ್ರಜೆಗಳಾಗಬೇಕೆಂದು ನುಡಿದರು.



ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಡಾ.ಪ್ರಭಾಕರ ಭಟ್ ಕಲ್ಲಡ್ಕ ಅವರು ವಿದ್ಯಾಭ್ಯಾಸ ಪಡೆದು ಯಾವುದೇ ವೃತ್ತಿಯಲ್ಲಿದ್ದರು ನಮ್ಮ ರಾಷ್ಟ್ರದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದೇಶದ ಒಳಿತಿಗೆ ಶ್ರಮಿಸಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನಲ್ಲಿ ತಜ್ಞರಾಗಿರುವ ಡಾ, ಶ್ಯಾಮ್‌ಪ್ರಸಾದ್, ಡಾ.ಸೀತಾರಾಮ್ ಪ್ರಸಾದ್, ಉದ್ಯಮಿಗಳಾದ ಶೈಲೇಶ್ ದಂಪತಿಗಳು, ವಿದ್ಯಾಕೇಂದ್ರದ ಅಧ್ಯಕ್ಷರಾದ ನಾರಾಯಣ ಸೋಮಯಾಜಿ, ಶ್ರೀಮತಿ ಕಮಲಾ ಪ್ರಭಾಕರ ಭಟ್, ಸಂಗೀತಾ ಭಟ್, ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀಯುತ ಶಿವಗಿರಿ ಸತೀಶ್ ಭಟ್ ಹಾಗೂ ಕಾರ್ಯದರ್ಶಿಗಳಾದ ಜಯರಾಮ. ರೈ, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

## ಅತಿಥಿಗಳ ಭೇಟಿ

ದಿನಾಂಕ 14.03.2016 ರಂದು ಶಿವಮೊಗ್ಗ ಜಿಲ್ಲೆಯ ಕುಮುದ್ವತಿ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಹೆಚ್.ವಿ ದಿನೇಶ್ ಅವರ ನೇತೃತ್ವದಲ್ಲಿ ವಿದ್ಯಾಸಂಸ್ಥೆಯ ಶಿಕ್ಷಕರು ಹಾಗೂ ಪೋಷಕರು ಆಗಮಿಸಿ ತರಗತಿ ಚಟುವಟಿಕೆಗಳನ್ನು ವೀಕ್ಷಿಸಿ ಸರಸ್ವತಿ ವಂದನೆಯಲ್ಲಿ ಪಾಲ್ಗೊಂಡು ವಿದ್ಯಾಸಂಸ್ಥೆಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ವಿಜ್ಞಾನ ದಿನಾಚರಣೆ

ದಿನಾಂಕ 01.03.2016ರಂದು ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ವಿಜ್ಞಾನ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀ ವಸಂತ ಮಾಧವ ಇವರು ವಿಜ್ಞಾನ ದಿನಾಚರಣೆಯ ಮಹತ್ವ ಸಿ.ವಿ.ರಾಮನ್ ಅವರ ಬಗ್ಗೆ ಅವರ ಆವಿಷ್ಕಾರಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮದ ನಂತರ ಮಕ್ಕಳೇ ತಯಾರಿಸಿದ ಪ್ರಯೋಗ ಹಾಗೂ ಪ್ರದರ್ಶಿನಿಗಳನ್ನು ವಿದ್ಯಾಕೇಂದ್ರದ ಸಂಚಾಲಕರಾದ ಡಾ.ಪ್ರಭಾಕರ ಭಟ್ ಕಲ್ಲಡ್ಕ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ನ್ಯಾಯವಾದಿ ಶಿವಗಿರಿ ಸತೀಶ್ ಭಟ್, ಶ್ರೀ ವಸಂತ ಮಾಧವ, ಶಾಲಾ ಮುಖ್ಯೋಪಾಧ್ಯಾಯರು ರವಿರಾಜ್ ಕಣಂತೂರು ವೀಕ್ಷಿಸಿದರು.

# ಪ್ರೌಢ ಶಾಲೆ

## ವಿಜ್ಞಾನ ದಿನಾಚರಣೆ :



ಕಲ್ಲಡ್ಕ: ದಿನಾಂಕ 01.03.2016ರಂದು ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ವಿಜ್ಞಾನ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀ ವಸಂತ ಮಾಧವ ಇವರು ವಿಜ್ಞಾನ ದಿನಾಚರಣೆಯ ಮಹತ್ವ ಸಿ.ವಿ.ರಾಮನ್ ಅವರ ಬಗ್ಗೆ ಅವರ ಆವಿಷ್ಕಾರಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮದ ನಂತರ ಮಕ್ಕಳೇ ತಯಾರಿಸಿದ ಪ್ರಯೋಗ ಹಾಗೂ ಪ್ರದರ್ಶಿನಿಗಳನ್ನು ವಿದ್ಯಾಕೇಂದ್ರದ ಸಂಚಾಲಕರಾದ ಡಾ.ಪ್ರಭಾಕರ ಭಟ್ ಕಲ್ಲಡ್ಕ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ನ್ಯಾಯವಾದಿ ಶಿವಗಿರಿ ಸತೀಶ್ ಭಟ್, ಶ್ರೀ ವಸಂತ ಮಾಧವ, ಶಾಲಾ ಮುಖ್ಯೋಪಾಧ್ಯಾಯರು ರವಿರಾಜ್ ಕಣಂತೂರು ವೀಕ್ಷಿಸಿದರು.

## ಸ್ಥಾನೀಯ ಬೈಠಕ್ :



ಮಕ್ಕಳಿಗೆ ಸಂಸ್ಕಾರಯುತ ರಾಷ್ಟ್ರಭಕ್ತಿಯನ್ನು ಹೊಮ್ಮಿಸುವ ಶಿಕ್ಷಣವನ್ನು ಶ್ರೀರಾಮ ವಿದ್ಯಾಕೇಂದ್ರ ನೀಡುತ್ತಿದೆ. ಈ ಶ್ರೇಷ್ಠ ಕಾರ್ಯಕ್ಕೆ ಇನ್ನಷ್ಟು ವೇಗವನ್ನು ತಂದುಕೊಡುವ ದೃಷ್ಟಿಯಿಂದ ವಿದ್ಯಾಕೇಂದ್ರದ ಸ್ಥಾನೀಯ ಬೈಠಕ್ ನೆರವೇರಿತು.

ಬರಿಮಾರು ಶ್ರೀರಾಮ ಭಜನಾ ಮಂದಿರ, ಶ್ರೀ ಸೋಮನಾಥೇಶ್ವರ ದೇವಸ್ಥಾನ ಇರಾ, ಶ್ರೀದೇವಿ ಭಜನಾ ಮಂದಿರ ಅನಂತಾಡಿ, ಎಸ್.ಹೆಚ್. ಸಭಾಭವನ ಬೋಳ್ಯಾರ್, ಶ್ರೀ ಶಾರದಾಂಬ ಭಜನಾ ಮಂದಿರ ವಗ್ಗ, ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಬಿ.ಸಿ.ರೋಡ್‌ನಲ್ಲಿ ಸ್ಥಾನೀಯ ಬೈಠಕ್ ನೆರವೇರಿತು.

ಬೈಠಕ್‌ನಲ್ಲಿ ಡಾ॥ ಪ್ರಭಾಕರ ಭಟ್ ಶಾಲೆಯ ಧ್ಯೇಯೋದ್ದೇಶಗಳ ಬಗ್ಗೆ, ಮಕ್ಕಳ ಚಟುವಟಿಕೆ ಪ್ರಗತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶ್ರೀ ವಸಂತಮಾಧವ ಶ್ರೀಮಾನ್ ಉಪಸ್ಥಿತರಿದ್ದರು.

## ದೀಪಪ್ರದಾನ :




ಸನಾತನ ಸಂಸ್ಕೃತಿಯ ಪ್ರತಿರೂಪ ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದಲ್ಲಿದೆ. ನಮ್ಮ ಭಾಷೆ ನಡೆ ನುಡಿ ಪರಂಪರೆಗಳು ಕ್ಲಿಷ್ಟಕರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಉತ್ತಮ ಶಿಕ್ಷಣದಿಂದ ಮಾತ್ರ ದೇಶಕ್ಕೆ ಉತ್ತಮ ಭವಿಷ್ಯವಿದೆ. ಎಂದು ಉದಯವಾಣಿ ಸುದ್ದಿ ಸಂಸ್ಥೆಯ ಮುಖ್ಯಸ್ಥ ಹಿರಿಯ ಪತ್ರಕರ್ತ ಮನೋಹರ ಪ್ರಸಾದ ಹೇಳಿದರು.




ರಾಮಾಯಾಣ ಮಹಾಭಾರತ ಮಹಾಕಾವ್ಯಗಳಾಗಿದ್ದು, ಅವು ಪುರಾಣಗಳಲ್ಲ. ಇತಿಹಾಸದಲ್ಲಿ ನಡೆದು ಹೋದ ಘಟನೆಗಳು ಜೀವನಕ್ಕೆ ಸ್ಫೂರ್ತಿದಾಯಕವಾಗಿವೆ. ವಿದ್ಯಾರ್ಥಿಗಳು ಉತ್ತಮ ಗುಣ ನಡತೆಗಳನ್ನು ಮೈಗೂಡಿಸಿಕೊಂಡು ಏಕಾಗ್ರತೆಯಿಂದ ಗುರಿ ಸಾಧನೆ ಮಾಡಬೇಕುಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಶಿಶುಮಂದಿರ, ಪ್ರಾಥಮಿಕ ಶಾಲೆಯ ಚಟುವಟಿಕೆಯನ್ನು ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ ಅವರು ಶ್ರೀರಾಮ ವಿದ್ಯಾಕೇಂದ್ರದಲ್ಲಿ ಶಿಶುಮಂದಿರದಿಂದ ಪದವಿ ತರಗತಿಯವರೆಗೆ ಉತ್ತಮ ವ್ಯಕ್ತಿತ್ವದ ಶಿಕ್ಷಣದೊಂದಿಗೆ ಸಮಾಜ ಮತ್ತು ರಾಷ್ಟ್ರಕ್ಕೆ ವಿಶೇಷ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ ಎಂದರು.

ಶ್ರೀರಾಮ ವಿದ್ಯಾಕೇಂದ್ರ ಸಂಚಾಲಕ ಡಾ॥ ಪ್ರಭಾಕರ್ ಭಟ್ ಮಾತನಾಡಿ ವಿದ್ಯಾಕೇಂದ್ರ ಬೆಳೆದು ಬಂದ ಬಗೆಯನ್ನು ತಿಳಿಸಿ, ನಮ್ಮತನವನ್ನು ಉಳಿಸಿ ಬೆಳೆಸುವ ಕಾರ್ಯವನ್ನು ವಿದ್ಯಾರ್ಥಿಗಳ ಮೂಲಕ ಬೆಳೆಸುವ ಕಾರ್ಯ ನಮ್ಮದಾಗಿದೆ. ಮೂಲ ನಂಬಿಕೆಯೊಂದಿಗೆ ಹಿಂದುತ್ವದ ಶಿಕ್ಷಣ ಜಗತ್ತಿನ ಒಳ್ಳೆಯದಕ್ಕೆ ಅಗತ್ಯವಾಗಿದೆಎಂದು ತಿಳಿಸಿದರು.

ವೇದಿಕೆಯಲ್ಲಿ ಅತಿಥಿಗಳಾಗಿ ಡಾ॥ ಎಸ್. ಎಮ್ ಹೆಗ್ಡೆ ಮಂಗಳೂರು, ಯುವ ಉದ್ಯಮಿ ನಿಶಾನ್ ಆಳ್ವ ಬಂಟ್ವಾಳ, ರಶ್ಮಿ ಆಳ್ವ, ದೇವಪ್ಪ ಶೆಣೈ ಸಿಂಗಾಪುರ, ರೇಷ್ಮಾ ಶೆಣೈ, ರೋಹಿಣಿ ಬಾಳಿಗಾ, ಉದ್ಯಮಿ ಕೃಷ್ಣಪ್ರಶಾಂತ್ ಪುತ್ತೂರು, ವಿದ್ಯಾಕೇಂದ್ರ ಅಧ್ಯಕ್ಷ ನಾರಾಯಾಣ ಸೋಮಾಯಾಜಿ, ಕಾರ್ಯನಿರ್ವಾಹಣಾಧಿಕಾರಿ ವಸಂತ ಮಾಧವ, ಮುಖ್ಯೋಪಾಧ್ಯಾಯ ರಮೇಶ ಎನ್, ಡಾ॥ ಕಮಲ ಪ್ರ. ಭಟ್, ವಿಶ್ವನಾಥ ಪ್ರಭು ಉಪಸ್ಥಿತರಿದ್ದರು. ಶಿಕ್ಷಕ ಜಯಾನಂದ ಪೆರಾಜೆ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ಮಾತನಾಡಿದರು. ಆರಂಭದಲ್ಲಿ 10ನೇ ವಿದ್ಯಾರ್ಥಿಗಳು 9ನೇ ವಿದ್ಯಾರ್ಥಿಗಳಿಗೆ ದೀಪ ಪ್ರದಾನ ಮಾಡಿ ಶಾಲೆಗೆ ತಮ್ಮಕೊಡುಗೆಯನ್ನು ಸಂಚಾಲಕರಿಗೆ ಸಮರ್ಪಿಸಿದರು. ಅತಿಥಿಗಳು ವಿದ್ಯಾರ್ಥಿಗಳಿಗೆ ತಿಲಕಧಾರಣೆ ಮಾಡಿ ಆಶೀರ್ವಾದಿಸಿದರು.

ವಿದ್ಯಾರ್ಥಿಗಳಾದ ಲೋಹಿತ್, ರಜನ್, ಹರ್ಷಿತಾ ಕಾರ್ಯಕ್ರಮ ನಿರ್ವಹಿಸಿದರು.

## ಅತಿಥಿಗಳ ಭೇಟಿ



ಮಧುಕರ ಸಭಾಂಗಣದಲ್ಲಿ ನಡೆದ ಪ್ರೌಢಶಾಲಾ ವಿಭಾಗದ ಸರಸ್ವತಿ ವಂದನಾ ಕಾರ್ಯಕ್ರಮದಲ್ಲಿ ಶ್ರೀ ಮೃತ್ಯುಂಜಯ, ಶಿಕ್ಷಕರು, ಡಬ್ಲಿನ್ ಸ್ಕೂಲ್, ಅಯರ್ಲೆಂಡ್ ಹಾಗೂ ಅವರ ಶಿಷ್ಯೆಯರು ಅತಿಥಿಗಳಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಮೈತ್ರೇಯಿ ಗುರುಕುಲದ ಮಾತಾಜಿಯಾದ ಶ್ರೀಮತಿ ರಾಜೇಶ್ವರಿ ಭಟ್ ಉಪಸ್ಥಿತರಿದ್ದರು.

# ಪದವಿಪೂರ್ವ ವಿಭಾಗ

## ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರ

2015–16ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಯು ದಿನಾಂಕ: 11.03.2016ರಿಂದ 31.03.2016ರವರೆಗೆ ನಡೆಯಿತು. ನಮ್ಮ ಸಂಸ್ಥೆಯ ವಿದ್ಯಾರ್ಥಿಗಳಲ್ಲದೆ ಸರಕಾರಿ ಪದವಿ ಪೂರ್ವ ಕಾಲೇಜು ನಾರ್ಶ ಮೈದಾನ, ಕರ್ನಾಟಕ ಪದವಿ ಪೂರ್ವ ಕಾಲೇಜು ಮಾಣಿ ಇಲ್ಲಿಯ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಯಿತು. ಒಟ್ಟು 485 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಸರಕಾರಿ ಪದವಿ ಪೂರ್ವ ಕಾಲೇಜು ಕಬಕ ಇಲ್ಲಿನ ಪ್ರಾಚಾರ್ಯರಾದ ಪ್ರೇಮಲತಾ ಇವರು ಮುಖ್ಯ ಪರೀಕ್ಷಾ ಧೀಕ್ಷಕರಾಗಿದ್ದರು.

## ದೀಪ ಪ್ರದಾನ ಕಾರ್ಯಕ್ರಮ



"ಜೀವನದಲ್ಲಿ ಎಲ್ಲರೂ ನಿರ್ದಿಷ್ಟ ಗುರಿ ಹೊಂದಿರಬೇಕು ನಂಬಿಕೆ, ಭರವಸೆ ಆಶಾವಾದ ಈ ಮೂರು ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಗುರಿ ತಲುಪಲು ಸಾಧ್ಯ" ಎಂದು ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷರಾದ ಬ್ರಿಗೇಡಿಯರ್, ಐ.ಎನ್.ರೈ. ಇವರು ಶ್ರೀರಾಮ ಪದವಿ ಪೂರ್ವ ಕಾಲೇಜಿನ 2015–16ನೇ ಸಾಲಿನ ಪದವಿ ಪೂರ್ವ ವಿದ್ಯಾರ್ಥಿಗಳ ಬೀಳ್ಕೊಡುಗೆ "ದೀಪಪ್ರದಾನ" ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.



ಭಾರತದ ಅಂತಃಸತ್ವ ಜಗತ್ತಿಗೆ ನೀಡಬೇಕಾದರೆ ನಮ್ಮ ವಿದ್ಯಾರ್ಥಿಗಳಲ್ಲಿ ಅಂತಃಸತ್ವ ಮೂಡುವುದು ಅಗತ್ಯ. ಈ ಕಾರ್ಯವನ್ನು ನಮ್ಮ ಸಂಸ್ಥೆ ನಡೆಸುತ್ತಿದೆ ಎಂದು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಡಾ। ಪ್ರಭಾಕರ ಭಟ್ ತಿಳಿಸಿದರು. ಎಸ್.ಸಿ.ಡಿ.ಸಿ.ಸಿ ಬ್ಯಾಂಕ್‌ನ ನಿರ್ದೇಶಕರು, ಶಾರದಾ ಗಣಪತಿ ವಿದ್ಯಾಸಂಸ್ಥೆಗಳು ಪುಣ್ಯಕೋಟಿ ನಗರ ಮುಡಿಪು ಇದರ ಸಂಚಾಲಕರಾದ ಶ್ರೀ ರಾಜಾರಾಮ ಭಟ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಶ್ರೀಮತಿ ಕಮಲಾ ಪ್ರಭಾಕರ ಭಟ್, ಶ್ರೀಮತಿ ಜ್ಯೋತಿ ರಾಜಾರಾಮ ಭಟ್, ನಿವೃತ್ತ ಸೈನಿಕರಾದ ಭಗವಾನ್ ಶೆಟ್ಟಿ, ಶ್ರೀರಾಮ ವಿದ್ಯಾಕೇಂದ್ರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ವಸಂತ ಮಾಧವ, ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಾಚಾರ್ಯರಾದ ವಸಂತ ಬಲ್ಲಾಳ್ ಸ್ವಾಗತಿಸಿ, ವಿದ್ಯಾರ್ಥಿನಿಯರಾದ ಸುಶ್ಮಿತಾ ವಂದಿಸಿ, ರಶ್ಮಿತಾ ಎಮ್.ಎಸ್. ಕಾರ್ಯಕ್ರಮ ನಿರ್ವಹಿಸಿದರು.

## ವಿಶೇಷ ತರಗತಿ ಉದ್ಘಾಟನೆ

2016–17 ಶೈಕ್ಷಣಿಕ ವರ್ಷದ ವಿಜ್ಞಾನ ವಿಭಾಗದ 'ವಿಶೇಷ ತರಗತಿ'ಗಳು ದಿನಾಂಕ 17.03.2016ರಂದು ಶ್ರೀರಾಮ ಪದವಿ ಪೂರ್ವ ವಿಭಾಗದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರಿಂದ ಉದ್ಘಾಟನೆಗೊಂಡಿತು. "ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಕೇವಲ ಡಾಕ್ಟರ್, ಇಂಜಿನಿಯರ್‌ಗಳಾದರೆ ಸಾಲದು, ಈ ದೇಶಕ್ಕೆ, ಸಮಾಜಕ್ಕೆ ಬೇಕಾದ ಮೂಲವಿಜ್ಞಾನ, ಮೂಲನಂಬಿಕೆ ಕಲಿತು ಬೆಳೆಸಬೇಕು ಹಾಗೂ ಕೆಲಸ ಅಥವಾ ವಿಷಯಗಳ ಮೇಲೆ ನಂಬಿಕೆ, ಶ್ರದ್ಧೆ ಬೇಕು. ಕಲಿಯುವ ವಿಷಯಗಳನ್ನು ಪುನಾರಾವರ್ತಿಸಿ ಕಲಿತರೆ ವಿಷಯಗಳ ಹಿಡಿತ ನಮ್ಮದಾಗುತ್ತದೆ" ಎಂದು ಹಿತನುಡಿಗಳನ್ನಾಡಿದರು.

ಈ ಸಂದರ್ಭದಲ್ಲಿ ವಿದ್ಯಾಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಯುತ ವಸಂತ ಮಾಧವ, ಪದವಿ ವಿಭಾಗದ ಪ್ರಾಂಶುಪಾಲರಾದ ಕೃಷ್ಣಪ್ರಸಾದ್, ಪದವಿ ಪೂರ್ವ ವಿಭಾಗದ ಪ್ರಾಂಶುಪಾಲರಾದ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ಈ ವಿಶೇಷ ತರಗತಿಯಲ್ಲಿ 95 ವಿದ್ಯಾರ್ಥಿಗಳಿದ್ದು ಎರಡು ತಿಂಗಳ ಕಾಲ ನಡೆಯಲಿದೆ. ಕು. ಶೈಲಿನಿ ಸ್ವಾಗತಿಸಿ, ಕು. ವಿದ್ಯಾಶ್ರೀ ಧನ್ಯವಾದವಿತ್ತರು. ಶ್ರೀಮತಿ ಜಯಲಕ್ಷ್ಮಿ ಕೆ. ಕಾರ್ಯಕ್ರಮ ನಿರೂಪಣೆ ಮಾಡಿದರು.

## ಪಾಲಕರ ಸಭೆ

ದಿನಾಂಕ 03.03.2016ರಂದು 2016ನೇ ಶೈಕ್ಷಣಿಕ ವರ್ಷದ ವಿಜ್ಞಾನ ವಿಭಾಗದ ವಿಶೇಷ ತರಗತಿಗಳ ವಿದ್ಯಾರ್ಥಿಗಳ ಪಾಲಕರ ಸಭೆ ನಡೆಯಿತು.

ಶಿಕ್ಷಣ ನಿರಂತರವಾದುದು. ವಿದ್ಯಾರ್ಥಿಗಳಲ್ಲಿ ಭಯ ನಿವಾರಣೆ ಮಾಡಲು ನಿತ್ಯ ನಿರಂತರ ಅಭ್ಯಾಸವನ್ನು ಮುಂದುವರೆಸಲು ವಿಶೇಷ ತರಗತಿಯ ಅಗತ್ಯವಿದೆ ಎಂದು ಶ್ರೀರಾಮ ವಿದ್ಯಾಕೇಂದ್ರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ವಸಂತ ಮಾಧವ ತಿಳಿಸಿದರು. ಪದವಿ ವಿಭಾಗದ ಪ್ರಾಚಾರ್ಯರಾದ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಪದವಿ ಪೂರ್ವ ವಿಭಾಗದ ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಪದವಿ ವಿಭಾಗ

## ಕನಕ ಪುರಸ್ಕಾರ 08.03.16



ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಸಂಶೋಧನಾ ಕೇಂದ್ರದವರು ನಡೆಸಿದ ಅಂತರ–ಜಿಲ್ಲಾ ಮಟ್ಟದ ದಾಸ ಕೀರ್ತನಾ ಸ್ಪರ್ಧೆಯಲ್ಲಿ ಭೋದಕ–ಭೋದಕೇತರ ವಿಭಾಗದಲ್ಲಿ ಭಾಗವಹಿಸಿದ ಪದವಿ ವಿಭಾಗದ ಅರ್ಥಶಾಸ್ತ್ರ ಉಪನ್ಯಾಸಕ ವಿ. ಮಂಜುನಾಥ ಎನ್. ಪುತ್ತೂರು ಇವರು ಪ್ರಥಮ ಬಹುಮಾನದೊಂದಿಗೆ ಕನಕ ಪುರಸ್ಕಾರವನ್ನು ಪಡೆದಿರುತ್ತಾರೆ.

## ಕ್ಯಾನ್ಸರ್ ಅರಿವು ಕಾರ್ಯಕ್ರಮ 04.03.16

ಕಲ್ಲಡ್ಕ ಶ್ರೀರಾಮ ಪ್ರಥಮ ದರ್ಜೆ

ಮಹಾವಿದ್ಯಾಲಯದ ಎನ್.ಎಸ್.ಎಸ್. ಘಟಕ ಮತ್ತು ಯೆನಪೋಯ ವಿಶ್ವವಿದ್ಯಾನಿಲಯ ಇದರ ಜಂಟಿ ಆಶ್ರಯದಲ್ಲಿ ಕ್ಯಾನ್ಸರ್ ಅರಿವು ಕಾರ್ಯಕ್ರಮವನ್ನು ಯೆನಪೋಯ ವಿಶ್ವವಿದ್ಯಾನಿಲಯದ ಸಂಯೋಜಕರಾದ ಡಾ. ಅಭಯ್ ಸುಭಾಷ್ ನಿರ್ಗುಡೆ ಉದ್ಘಾಟಿಸಿ ಕಾನ್ಸರ್ ಒಂದು ಮಾರಕ ರೋಗ. ಮಾನಸಿಕ ಸ್ಥೈರ್ಯದಿಂದ ಎಂತಹ ಮಾರಕ ರೋಗವನ್ನು



ತಡೆಗಟ್ಟಬಹುದು. ಈ ರೋಗ ಬಂದಾಗ ಮಾನಸಿಕವಾಗಿ ಕುಗ್ಗುವ ಅಗತ್ಯವಿಲ್ಲ. ಅಲ್ಲದೇ ಪ್ರಾರಂಭಿಕ ಹಂತದಲ್ಲಿ ಅದನ್ನು ಅರಿತಲ್ಲಿ ಗುಣಪಡಿಸಲು ಸಾಧ್ಯ ಎಂದು ಹೇಳಿದರು.

ಈ ಒಂದು ದಿನದ ಕಾರ್ಯಾಗಾರದಲ್ಲಿ ಬಂಟ್ವಾಳ ಪ್ರಥಮ ದರ್ಜೆ ಕಾಲೇಜು, ವಿಟ್ಲ ಪ್ರಥಮ ದರ್ಜೆ ಕಾಲೇಜು, ಮೊಡಂಕಾಪು ಕಾರ್ಮೆಲ್ ಕಾಲೇಜಿನ 200ಕ್ಕೂ ಹೆಚ್ಚು ಎನ್.ಎಸ್.ಎಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಸಂಚಾಲಕ ಡಾ॥ ಪ್ರಭಾಕರ ಭಟ್ ಕಲ್ಲಡ್ಕ, ಮುಖ್ಯಕಾರ್ಯನಿರ್ವಹಣಾಧಿಕಾರಿ ವಸಂತ ಮಾಧವ ಯೆನಪೋಯ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ವಿಜಯ್ ಕುಮಾರ್, ಡಾ. ವರುಣ್, ಡಾ.ಆಶ್ವಿನಿ ಶೆಟ್ಟಿ, ಡಾ. ರೇಶ್ಮಾ, ಡಾ. ಇಮ್ರಾನ್, ಡಾ.ಸಾಹುಲ್ ಉಪಸ್ಥಿತರಿದ್ದರು.

## ಮಾಸಿಕ ಭಜನೆ

ಈ ತಿಂಗಳ ಮಾಸಿಕ ಭಜನೆಯನ್ನು ದ್ವಿತೀಯ ಬಿಎ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಮಾರ್ಚ್ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳು ಉಪನ್ಯಾಸಕರು ಶ್ರದ್ಧಾನಿಧಿ ಸಮರ್ಪಣೆ ಮಾಡಿದರು.

**ದಿನಾಂಕ 21.03.2016**

ಕಾಲೇಜಿನ ಸ್ಪೋಕನ್ ಇಂಗ್ಲೀಷ್ ತರಬೇತಿಯು ಆರಂಭಗೊಂಡಿದ್ದು ಪ್ರತೀ ದಿನ ಸಂಜೆ4:15ರಿಂದ ನಡೆಯುತ್ತಿದೆ. ಒಟ್ಟು 30 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ.

**ದಿನಾಂಕ 03.03.16**

ವಿವೇಕಾನಂದ ಕಾಲೇಜು ಪುತ್ತೂರು ಇಲ್ಲಿನ ಎಂ.ಬಿ.ಎ ವಿಭಾಗದ ಪ್ರೋ॥ ಆಶ್ಲೆ ಡಿಸೋಜಾ ಇವರು ಮುಂದಿನ ವೃತ್ತಿ ಶಿಕ್ಷಣ ತರಬೇತಿ ಮಾಹಿತಿಯನ್ನು ಅಂತಿಮ ವಿಭಾಗದ ಬಿಕಾಂ ಹಾಗೂ ಬಿಎ ವಿದ್ಯಾರ್ಥಿಗಳಿಗೆ ನೀಡಿರುತ್ತಾರೆ.



## ದಿನಾಂಕ 06.03.2016ರಿಂದ 12.03.2016ರವರೆಗಿನ ದೀರ್ಘ ಪ್ರವಾಸ

ಈ ವರ್ಷದ ದೀರ್ಘ ಶೈಕ್ಷಣಿಕ ಪ್ರವಾಸವನ್ನು ಮಧ್ಯಭಾರತದ ಮಹಾರಾಷ್ಟ್ರದ ಮುಂಬಯಿ, ಅಜಂತಾ ಗುಹಾಂತರ ದೇವಾಲಯಗಳ ದರ್ಶನ, ಎಲ್ಲೋರಾದ ಕೈಲಾಸನಾಥ ದೇವಸ್ಥಾನ, ಬ್ರಹ್ಮಗಿರಿ ಬೆಟ್ಟ, ಇಂಡಿಯಾ ಗೇಟ್, ಮುಂಬಯಿ ಮಹಾಲಕ್ಷ್ಮಿ ದೇವಸ್ಥಾನ, ಸಿದ್ಧಿ ವಿನಾಯಕ ದೇವಸ್ಥಾನ, ಘೃಷ್ಣೇಶ್ವರ ಜ್ಯೋತಿರ್ಲಿಂಗ, ದೇವಘಡ, ಬೀಬಿ ಕಾ ಮಕ್‌ಬಾರ, ನಾಸಿಕ್, ಪಂಚವಟಿ, ಮುಂಬಯಿ ಲೋಕಮಾನ್ಯ ತಿಲಕ್ ಟರ್ಮಿನಲ್, ಹೋಟೇಲ್ ತಾಜ್, ತ್ರಯಂಬಕೇಶ್ವರ ಮುಂತಾದ ಸ್ಥಳಗಳಿಗೆ ಭೇಟಿ ನೀಡಲಾಯಿತು. ಪ್ರವಾಸವು ಹೆಚ್ಚಾಗಿ ಚಾರಣ ಸ್ವರೂಪದಲ್ಲೇ ಇತ್ತು. ಒಟ್ಟು 70 ವಿದ್ಯಾರ್ಥಿಗಳು, 8 ಉಪನ್ಯಾಸಕರು ಪಾಲ್ಗೊಂಡಿದ್ದರು.



**ದಿನಾಂಕ 15.03.2016**

ಸಂತ ಫಿಲೋಮಿನಾ ಕಾಲೇಜು ಪುತ್ತೂರಿನಲ್ಲಿ ನಡೆದ ಗ್ರಾಮೀಣ ಕ್ರೀಡಾಕೂಟ 2016 ಇದರಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಕಾವ್ಯಶ್ರೀ, ಆಶಾ, ಅಕ್ಷತಾ, ತೀರ್ಥೇಶ್, ಸಚಿನ್ ಕುಮಾರ್, ಸ್ವಾತಿ, ಯೋಗಿಶ್, ಸಾಯಿಪ್ರಸಾದ್, ದೀಪಕ್ ಟಿ.ಸಿ., ದುರ್ಗಾಪ್ರಸಾದ್, ಮಹೇಶ್, ಭಾಗವಹಿಸಿರುತ್ತಾರೆ. ಇದರಲ್ಲಿ ಅಕ್ಷತಾ ಸೂಜಿ ದಾರ ಹಾಕುವುದು ಪ್ರಥಮ ಸ್ಥಾನ, ದುರ್ಗಾಪ್ರಸಾದ್ ಸಚಿನ್ ಹಾಳೆ ಎಳೆಯುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

**ದಿನಾಂಕ 17.03.2016**

ಸ್ವಾಮಿ ಶ್ರೀ ವೆಂಕಟರಮಣ ಕಾಲೇಜು ಬಂಟ್ವಾಳದಲ್ಲಿ ನಡೆದ ಕವಿತಾ ಕಮ್ಮಟದಲ್ಲಿ ವಿದ್ಯಾರ್ಥಿಗಳಾದ ಕಾರ್ತಿಕ, ಚಿತ್ರಾಕ್ಷಿ ಕವಿತಾ ವಾಚನ ಮಾಡಿದರೆ ಶಿವಪ್ರಸಾದ್, ಸವಿತಾ ಭಾಗವಹಿಸಿರುತ್ತಾರೆ.



**ದಿನಾಂಕ 23.03.2016**

ಸ್ವಾಮಿ ಶ್ರೀ ವೆಂಕಟರಮಣ ಕಾಲೇಜು ಬಂಟ್ವಾಳದಲ್ಲಿ ನಡೆದ ಬ್ಯಾಂಕ್ ಆಧಾರಿತ ವಿಷಯವನ್ನೊಳಗೊಂಡ ಪತ್ರವಾಚನ ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಶರತ್ ಕಾರಂತ್, ಕಾರ್ತಿಕ್ ದ್ವಿತೀಯ ಬಿಕಾಂ ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ. ಜೊತೆಗೆ ರಶ್ಮಿತಾ, ತೀರ್ಥೇಶ್, ದೀಪಕ್ ನಾಯಕ್, ಮೋಹಿನಿ, ಅನನ್ಯ, ಹರ್ಷಿತಾ ಭಾಗವಹಿಸಿರುತ್ತಾರೆ. ಉಪನ್ಯಾಸಕಿ ಸೌಮ್ಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿರುತ್ತಾರೆ.

**ದಿನಾಂಕ 23.03,16**

ಬೆಸೆಂಟ್ ಕಾಲೇಜು ಮಂಗಳೂರು ಇಲ್ಲಿನ ಎಂ.ಬಿ.ಎ ವಿಭಾಗದ ಮುಖ್ಯಸ್ಥರಾದ ಸುರೇಶ್ ಇವರು ವೃತ್ತಿ ಶಿಕ್ಷಣ ತರಬೇತಿಯ ಮಾಹಿತಿಯನ್ನು ಅಂತಿಮ ವಿಭಾಗದ ಬಿ.ಕಾಂ ವಿದ್ಯಾರ್ಥಿಗಳಿಗೆ ನೀಡಿರುತ್ತಾರೆ.

**ಕಿರುಪ್ರವಾಸ** ದಿನಾಂಕ 20.03.2016

ಈ ಬಾರಿಯ ಕಿರುಪ್ರವಾಸವು ಬೆಳ್ತಂಗಡಿಯ ಇತಿಹಾಸ ಪ್ರಸಿದ್ಧ ನರಸಿಂಹಗಡ (ಗಡಾಯಿಕಲ್ಲು) ಕನ್ಯಾಡಿಯ ಶ್ರೀ ರಾಮಮಂದಿರ ಹಾಗೂ ಎರ್ಮಾಯಿ ಜಲಪಾತಕ್ಕೆ ಆಯೋಜಿಸಲಾಗಿತ್ತು. 138 ವಿದ್ಯಾರ್ಥಿಗಳು ಹಾಗೂ 7 ಉಪನ್ಯಾಸಕರು ಭಾಗವಹಿಸಿದ್ದರು.

ನರಸಿಂಹಗಡದ ಐತಿಹಾಸಿಕ ಹಿನ್ನೆಲೆಯ ಬಗೆಗೆ ಉಪನ್ಯಾಸಕಿ ರೇಖಾ ಉಪನ್ಯಾಸವನ್ನಿತ್ತರು. ಉಪನ್ಯಾಸಕರಾದ ಮಂಜುನಾಥ್ ಇವರಿಂದ ಭಾವಗೀತೆಗಳ ಗಾಯನ ಕಾರ್ಯಕ್ರಮ ಬೆಟ್ಟದ ತುದಿಯಲ್ಲಿ ನಡೆಯಿತು. ಬೆಳಗಿನಿಂದ ಸಂಜೆಯವರೆಗೆ ಹಮ್ಮಿಕೊಳ್ಳಲಾದ ಈ ಚಾರಣದಲ್ಲಿ ವಿದ್ಯಾರ್ಥಿಗಳು ಉತ್ಸುಕತೆಯಿಂದ ಭಾಗವಹಿಸಿದರು.



## ಪದವಿ ಪ್ರತಿಭಾ ದಿನೋತ್ಸವದಲ್ಲಿ ಪ್ರದರ್ಶನಗೊಂಡ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಸಚಿತ್ರ ನೋಟ


















# ಶ್ರೀರಾಮ ವಿದ್ಯಾಕೇಂದ್ರ

ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, ದ.ಕ. 574 222

## ಸಮಗ್ರ ಶಿಕ್ಷಣ ಪರಿಪೂರ್ಣ ವ್ಯಕ್ತಿತ್ವ

**ಕಲ್ಲಡ್ಕ.....**
ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ (N.H 75) ಪಕ್ಕದಲ್ಲಿರುವ ಒಂದು ಪುಟ್ಟ ಹಳ್ಳಿ. ಸಂಘದ ಶಾಖೆಯ ಮೂಲಕ ಸಾಮಾಜಿಕವಾಗಿ ಅರಳಿದ ಭಾರತೀಯ ಶಿಕ್ಷಣದ ಪುಷ್ಪ ಶ್ರೀರಾಮ ವಿದ್ಯಾಕೇಂದ್ರ.

ಅರಳುತ್ತಾ ಹೋದಂತೆ ತನ್ನ ಸುಗಂಧವನ್ನು ಪ್ರಾಂತ, ರಾಷ್ಟ್ರದೆಡೆಗೆ ಪಸರಿಸುತ್ತ, ಹತ್ತನೇ ತರಗತಿಯವರೆಗೆ **ಮಾತೃಭಾಷೆಯಲ್ಲೇ ಉಚಿತವಾಗಿಯೇ ಶಿಕ್ಷಣವನ್ನು ನೀಡುವ ಈ ಕಾರ್ಯಕ್ಕೆ ಇದೀಗ 35ರ ಹರೆಯ....**

ಪ್ರಸ್ತುತ ಶಿಶುಮಂದಿರದಿಂದ ಪದವಿಯವರೆಗೆ 3130+ ವಿದ್ಯಾರ್ಥಿಗಳನ್ನು ಹೊಂದಿರುವ ವಿದ್ಯಾಕೇಂದ್ರ ಸಮಾಜ ಪರಿವರ್ತನೆಯ ತನ್ನ ಕೈಂಕರ್ಯದಲ್ಲಿ ದಾಪುಗಾಲನ್ನಿಟ್ಟು ಮುಂದುವರಿಯುತ್ತಿದೆ.

**ಶ್ರೀರಾಮ ಸಮಗ್ರ ಶಿಶು ಶಿಕ್ಷಣ ಕೇಂದ್ರ :**
3½ ಯಿಂದ 5½ ವಯೋಮಾನದ 160+ ಶಿಶುಗಳಿಗೆ ಪಂಚಕೋಶಾತ್ಮಕ ವಿಕಾಸದ ಚಟುವಟಿಕೆಗಳನ್ನು ವೈಜ್ಞಾನಿಕವಾಗಿ ಭಾರತೀಯ ಪರಂಪರೆಗೆ ಅನುಗುಣವಾಗಿ ನೀಡುವ ತಾಣ. ತಾಲೂಕಿನ 4 ಅನ್ಯ ಕೇಂದ್ರಗಳಲ್ಲಿ ಶಿಶುಮಂದಿರಗಳು. ಸಂಖ್ಯೆ : 144



**ಶ್ರೀರಾಮ ಪೂರ್ವಗುರುಕುಲ :**
1ರಿಂದ 4ನೇ ತರಗತಿಯ 480+ ಮಕ್ಕಳಿಗೆ ಶಿಶುಶಿಕ್ಷಣದ ಮಾದರಿಯಲ್ಲೇ ಮಗುವಿನ ಸರ್ವಾಂಗೀಣ ವಿಕಾಸಕ್ಕೆ ಚಟುವಟಿಕೆಗಳ ಮೂಲಕ ಮಾತೃ ಭಾಷಾ (ಕನ್ನಡ) ಮಾಧ್ಯಮದಲ್ಲಿ ಶಿಕ್ಷಣ – ಸಂಸ್ಕೃತದ ಜೊತೆಗೆ ಇಂಗ್ಲೀಷ್ ಭಾಷೆಯನ್ನು ಸದೃಢಗೊಳಿಸುವ ವ್ಯವಸ್ಥೆ.



**ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ :**
5, 6, 7ನೇ ತರಗತಿಯ 390+ ಮಕ್ಕಳಿಗೆ ರಾಜ್ಯದ ಪಠ್ಯಕ್ರಮದಲ್ಲಿ ಚಟುವಟಿಕೆಯುಕ್ತ ಸಂಸ್ಕಾರಬದ್ಧ ಹಾಗೂ ಮಾತೃಭಾಷಾ ಮಾಧ್ಯಮದಲ್ಲಿ ಕಲಿಕೆ. ಪ್ರತಿಯೊಂದು ಮಗುವಿನ ಪ್ರತಿಭೆಯನ್ನು ಪೂರ್ಣ ಪ್ರಮಾಣದಲ್ಲಿ ಅರಳಿಸಿ ಬೆಳೆಸುವ ಮಾತೃ ಹೃದಯದ ಶಿಕ್ಷಣ. ಸಂಸ್ಕೃತ, ಇಂಗ್ಲೀಷ್ ಭಾಷಾ ಕಲಿಕೆಯ ಮುಂದುವರಿಕೆ.



**ಶ್ರೀರಾಮ ಪ್ರೌಢಶಾಲೆ :**
8, 9, 10ನೇ ತರಗತಿಯ 870+ ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮದ ಕನ್ನಡ ಮಾತೃ ಭಾಷಾ ಮಾಧ್ಯಮದ ಉಚಿತ ಶಿಕ್ಷಣ ಸಮವಸ್ತ್ರ ಪಠ್ಯ ಹಾಗೂ ಬರೆಯುವ ಪುಸ್ತಕ ಮಧ್ಯಾಹ್ನ ಭೋಜನಗಳೂ ಉಚಿತ. ವಿದ್ಯಾಕೇಂದ್ರದ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿಯುವಿಕೆಯಿಂದಾಗಿ 10ನೇ ತರಗತಿಯವರೆಗಿನ ಶಿಕ್ಷಣದಿಂದ ಯಾವುದೇ ಮಗು ವಂಚಿತವಾಗಬಾರದೆಂಬುದು ನಮ್ಮ ಧ್ಯೇಯ.



**ಶ್ರೀರಾಮ ಪದವಿಪೂರ್ವ ಕಾಲೇಜು :**
ವಾಣಿಜ್ಯ ಕಲಾ ಹಾಗೂ ವಿಜ್ಞಾನ ವಿಭಾಗಗಳಲ್ಲಿ 750+ ವಿದ್ಯಾರ್ಥಿಗಳು ಸಂಸ್ಕಾರಯುತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾ ಸಂವೇದನಾಶೀಲ ಯುವ ಮನಸ್ಸುಗಳ ನಡುವೆ ಸಾಮರಸ್ಯದ ಬೆಳವಣಿಗೆಗೆ ಪ್ರೇರಣೆ. ಜೀವನದ ಲಕ್ಷ್ಯಸಿದ್ಧಿಗಾಗಿ ತರಬೇತಿ.



**ಶ್ರೀರಾಮ ಪದವಿ ಕಾಲೇಜು :**
ಬಿ.ಎ. ಮತ್ತು ಬಿ.ಕಾಂ ಪದವಿಗಳಿಗಾಗಿ ದಾಖಲಾಗುವ 400+ ವಿದ್ಯಾರ್ಥಿಗಳಲ್ಲಿ ಸ್ಥೈರ್ಯ ಧೈರ್ಯಗಳನ್ನು ಮೂಡಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ತನ್ನ ವ್ಯಕ್ತಿತ್ವದ ಬೆಳವಣಿಗೆಯನ್ನು ಕಂಡುಕೊಳ್ಳುವ ವಿಶ್ವವಿದ್ಯಾಲಯದ ಶಿಕ್ಷಣ.



**ಶ್ರೀರಾಮ ವಸತಿ ನಿಲಯ :**
ಐದರಿಂದ ಪದವಿಯವರೆಗಿನ 300+ ಬಾಲಕ ಬಾಲಕಿಯರಿಗೆ ಮನೆಯ ಸಂಸ್ಕಾರದ ಜೊತೆಗೆ ಶಿಸ್ತುಬದ್ಧ ದಿನಚರಿಯನ್ನು, ಕಲಿಕೆಯ ಪ್ರಗತಿಯೊಂದಿಗೆ ಪ್ರತಿಭೆಯ ವಿಕಾಸಕ್ಕೆ ಅನುವು ಮಾಡುವ ಶುದ್ಧ ಸಸ್ಯಾಹಾರಿ ಆಶ್ರಯಗೃಹ.

**08255-275273, 279673 (ಟ್ರಸ್ಟ್), 275479 (ಶಿಶುಮಂದಿರ), 275073 (ಪ್ರಾಥಮಿಕ)**
**275183 (ಪ್ರೌಢ), 275693 (ಪದವಿಪೂರ್ವ), 200085 (ಪದವಿ), 275293 (ವಸತಿ)**
**9480228273 (C.E.O.) 9483292438 (P.R.O.)**
**info@srvk.org** **srvk.official** **srvkkalladka** Web : **www.srvk.org**

**Postal Regn No. PTR/133/2015-17 Licensed to Post without pre-payment License No.: SK/WPP/PTR/177/2015-17**

**Vol. : 2 Issue : 12 Rs. 10/-**

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org

BOOK POST

**ಸವಿಧೇ,**

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363